**ದಿನಾಂಕಃ 13.03.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಕೆ ಸಿ ಎ., ಪ್ರತಿವಾದಿ ಪರ ವಕೀಲರಿಂದ**

**51.** ವಾದಪತ್ರದ 16 ನೇ ಖಂಡಿಕೆಯಲ್ಲಿ ಹೇಳಿರುವ 43,95,000/- ರೂಪಾಯಿಗಳನ್ನು ದಾವಾ ಶೆಡ್ಯೂಲ್ "ಎ" ಆಸ್ತಿಗಳಿಗೆ ಸಂಬಂದಿಸಿದಂತೆ ನಿಪಿ-2 ರಂತೆ ಕೊಟ್ಟಿದ್ದು, ಸದರಿ ಹಣವನ್ನು ನಾನು ದಾವಾ ಶೆಡ್ಯೂಲ್ "ಬಿ" ಆಸ್ತಿಗಳಿಗೆ ಸಂಬಂಧಿಸಿದಂತೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**52.** ವಾದಪತ್ರದ 17 ನೇ ಖಂಡಿಕೆಯಲ್ಲಿ ಹೇಳಿರುವ 4,50,00,000/- ರೂಪಾಯಿಗಳನ್ನು ದಾವಾ ಶೆಡ್ಯೂಲ್ "ಎ" ಆಸ್ತಿಗಳಿಗೆ ಸಂಬಂದಿಸಿದಂತೆ ನಿಪಿ-2 ರಂತೆ ಕೊಟ್ಟಿದ್ದು, ಸದರಿ ಹಣವನ್ನು ನಾನು ದಾವಾ ಶೆಡ್ಯೂಲ್ "ಸಿ" ಆಸ್ತಿಗಳಿಗೆ ಸಂಬಂಧಿಸಿದಂತೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**53.** ನಾನು ಇಲ್ಲಿಯವರೆಗೂ 31 ಎಕರೆ 6 ಗುಂಟೆ ಜಮೀನಿಗೆ ಸಂಬಂದಿಸಿದಂತೆ ಒಟ್ಟು 8,70,20,000/- ರೂಪಾಯಿಗಳನ್ನು ಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯೂ ದಾವಾ ಶೆಡ್ಯೂಲ್ " ಬಿ ಮತ್ತು ಸಿ " ಆಸ್ತಿಗಳಿಗೆ ಸಂಬಂದಿಸಿದಂತೆ 4,94,00,000/- ಚಿಲ್ಲರೆ ಹಣವನ್ನು ಮುಂಗಡವಾಗಿ ನೀಡಿದ್ದು, 3,76,0000/- ರೂಪಾಯಿಗಳನ್ನು ದಾವಾ ಶೆಡ್ಯೂಲ್ "ಎ" ಆಸ್ತಿಗಳಿಗೆ ಸಂಬಂದಿಸಿದಂತೆ ನಿಪಿ-2 ರಂತೆ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ಆದ್ದರಿಂದ ನಾನು ಪ್ರತಿವಾದಿಗೆ 6,19,80,000/- ರೂಪಾಯಿಗಳು ಕೊಡುವುದು ಬಾಕಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯೂ ಮುಂದುವರೆದು ನಾನು ದಾವಾ ಶೆಡ್ಯೂಲ್ " ಬಿ ಮತ್ತು ಸಿ " ಆಸ್ತಿಗಳಿಗೆ ಸಂಬಂದಿಸಿದಂತೆ ಮುಂಗಡವಾಗಿ 4,94,00,000/- ರೂಪಾಯಿಗಳನ್ನು ಕೊಟ್ಟಿದ್ದು ಉಳಿದ ಹಣವನ್ನು ಕ್ರಯ ಪತ್ರದ ವೇಳೆ ಕೊಡಲು ಬದ್ದನಿರುತ್ತೇನೆ.

**54.** ವಾದಪತ್ರದ 39 ನೇ ಖಂಡಿಕೆಯಲ್ಲಿ ದಾವಾ ಶೆಡ್ಯೂಲ್ " ಬಿ ಮತ್ತು ಸಿ " ಆಸ್ತಿಗಳಿಗೆ ಸಂಬಂದಿಸಿದಂತೆ ನಾನು 3,16,50,000/- ರೂಪಾಯಿಗಳನ್ನು ಮಾತ್ರ ಕೊಡುವುದು ಬಾಕಿ ಇರುತ್ತದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

**55.** ವಾದಪತ್ರದ 28 ನೇ ಖಂಡಿಕೆಯಲ್ಲಿ ದಾವಾ ಶೆಡ್ಯೂಲ್ " ಬಿ" ಆಸ್ತಿಗಳಿಗೆ ಸಂಬಂದಿಸಿದಂತೆ ನಾನು 1,51,50,000/- ರೂಪಾಯಿಗಳನ್ನು ಮಾತ್ರ ಕೊಡುವುದು ಬಾಕಿ ಇರುತ್ತದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

**56.** 1 ಎಕರೆ ಜಮೀನಿಗೆ 52 ಲಕ್ಷದಂತೆ 8,47,60,000/– ಆಗುತ್ತಿದ್ದು ನಾನು ಈಗಾಗಲೇ 8,70,20,000/– ರೂಪಾಯಿಗಳನ್ನು ಒಟ್ಟು ಸರ್ವೇ ನಂಬರ್ ಗಳಿಗೆ ನೀಡಿರುವುದರಿಂದ 8,70,20,000/– ರೂಪಾಯಿಗಳಲ್ಲಿ 8,47,60,000/– ಕಳೆದರೆ 22,60,000/– ಆಗುತ್ತಿದ್ದು ಉಳಿಕೆ ಹಣವನ್ನು ಮಾತ್ರ ನಾನು ದಾವಾ ಶೆಡ್ಯೂಲ್ " ಬಿ ಮತ್ತು ಸಿ " ಆಸ್ತಿಗಳಿಗೆ ಸಂಬಂದಿಸಿದಂತೆ ಮುಂಗಡವಾಗಿ ನೀಡಿರುತ್ತೇನೆಂದರೆ ಸರಿಯಲ್ಲ. ನಾನು ಕೇವಲ 22,60,000/– ರೂಪಾಯಿಗಳನ್ನು ಮುಂಗಡವಾಗಿ ಕೊಟ್ಟಿರುವುದರಿಂದ ಉಳಿದ ಗಣನೀಯ ಹಣವನ್ನು ಕೊಡಲು ಬಾಧ್ಯಸ್ಥನಿರುತ್ತೇನೆಂದರೆ ಸರಿಯಲ್ಲ.

**57.** ವಾದಪತ್ರದ 29 ನೇ ಖಂಡಿಕೆಯಲ್ಲಿ ಹೇಳಿರುವಂತೆ ನಾನು 73.17% ಹಣವನ್ನು ಈಗಾಗಲೇ ಪ್ರತಿವಾದಿಗೆ ಕೊಟ್ಟಿದ್ದು ಇನ್ನೂ ಕೇವಲ 26.83% ಹಣ ಕೊಡುವುದು ಬಾಕಿ ಇರುತ್ತದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ–1 ರಂತೆ ಪ್ರತಿವಾದಿಯೂ ಈಗಲೂ ನಡೆದುಕೊಳ್ಳಲು ತಯಾರು ಇರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿ ಪ್ರಮಾಣಿಕ ಮಾರಾಟಗಾರನಾಗಿರುತ್ತಾನೆ ಎಂದರೆ ಸರಿಯಲ್ಲ. ನಿಪಿ–1 ರಂತೆ ನಾನು ನಡೆದುಕೊಳ್ಳಲು ತಯಾರು ಇರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ನಿಯೋಗಿಯೊಂದಿಗೆ ಷರೀಕ್ ಆಗಿ ನನಗೆ ಅನುಕೂಲವಾಗುವಂತೆ ವರದಿಯನ್ನು ತಯಾರಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಿಪಿ–1 ರಂತೆ ನಾನು ಪ್ರತಿವಾದಿಗೆ 6,19,80,000/– ರೂಪಾಯಿಗಳನ್ನು ಕೊಟ್ಟರೆ ನನಗೆ ದಾವಾ ಬಿ ಮತ್ತು ಸಿ ಶೆಡ್ಯೂಲ್ ಆಸ್ತಿಗಳನ್ನು ಬರೆದುಕೊಡಲು ತಯಾರು ಇರುತ್ತಾರೆ ಎಂದರೆ ಸಾಕ್ಷಿಯೂ ಮೋಡಿಫೆಯಡ್ ಅಗ್ರಿಮೆಂಟ್ ನಲ್ಲಿ ನಮೂದು ಇರುವಂತೆ ನಾನು ಯಾವಾಗಲೂ ತಯಾರು ಇರುತ್ತೇನೆಂದು ನುಡಿಯುತ್ತಾರೆ. ನಾನು ನಿಪಿ–1 ರಂತೆ ನಡೆದುಕೊಳ್ಳದೇ ಇರುವ ಕಾರಣಕ್ಕೆ ಪ್ರತಿವಾದಿಯೂ ನನಗೆ ಕ್ರಯ ಪತ್ರ ಮಾಡಿಕೊಡಲು ಬದ್ದನಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.